



‘ಚಂದ್ರಯಾನ–3’ ನೌಕೆಯ ನೋದನಕೋಶದ ಮೇಲೆ ಜೋಡಣೆಗೊಂಡ ಇಳಿಯುವ ಕೋಶ, ತನ್ನ ಕಾಲುಗಳನ್ನು ಚಾಚಿಕೊಂಡ ಸ್ಥಿತಿಯಲ್ಲಿ.

ಚಿತ್ರಕೃಪೆ: ಇಸ್ರೋ




ಚಂದ್ರಯಾನ–3 ನೌಕೆಯ ನೋದನ ಕೋಶದ ಮೇಲೆ ಕುಳಿತ ಇಳಿಯುವ ಕೋಶ.

ಚಿತ್ರಕೃಪೆ: ಇಸ್ರೋ




ನಾಲ್ಕು ಕಾಲುಗಳುಳ್ಳ ‘ಚಂದ್ರಯಾನ–3’ ನೌಕೆಯ ಇಳಿಯುವ ಕೋಶದ ವಿವರಗಳು.

ಚಿತ್ರಕೃಪೆ: ಇಸ್ರೋ





‘ಚಂದ್ರಯಾನ–3’ರ ಇಳಿಯುವ ಕೋಶದಿಂದ ರೋವರ್ ಕೆಳಗಿಳಿಯುವ ಬಗೆ. ಚಿತ್ರಕೃಪೆ: ಇಸ್ರೋ

ಕಾರ್ಯ ಭಾರತದಿಂದ ಪ್ರಾರಂಭವಾದದ್ದು 21ನೇ ಶತಮಾನದ ಮೊದಲ ದಶಕದಲ್ಲಿ.

## ಭಾರತದ ರಂಗಪ್ರವೇಶ

1990ರ ದಶಕದ ಮಧ್ಯಭಾಗದ ಹೊತ್ತಿಗೆ ಅಂತರಿಕ್ಷ ಕ್ಷೇತ್ರದಲ್ಲಿನ ಒಂದು ಪ್ರಮುಖ ರಾಷ್ಟ್ರವಾಗಿ ಭಾರತ ಹೊರಹೊಮ್ಮಲಾರಂಭಿಸಿತು. ಇದರ ಅಂಗವಾಗಿ ನಮ್ಮ ದೇಶ ಉಪಗ್ರಹಗಳನ್ನು ಯೋಜಿಸಿ, ರೂಪಿಸಿ, ನಿರ್ಮಿಸುವುದಷ್ಟೇ ಅಲ್ಲ, ಅವುಗಳನ್ನು ನಿಗದಿಯಾದ ಕಕ್ಷೆಗೆ ಸೇರಿಸುವ ಬೃಹತ್ ರಾಕೆಟ್ ಒಂದರ ನಿರ್ಮಾಣದಲ್ಲೂ ಯಶಸ್ಸನ್ನು ಸಾಧಿಸಿತು. ಅದಕ್ಕಿಂತ ಮುಖ್ಯವಾಗಿ ಉಪಗ್ರಹಗಳನ್ನು ತನ್ನ ಸರ್ವತೋಮುಖ ಅಭಿವೃದ್ಧಿಗೆ ಬಳಸಿಕೊಳ್ಳುವಲ್ಲೂ ಯಶಸ್ಸನ್ನು ಕಾಣಲಾರಂಭಿಸಿತು. ಉಪಗ್ರಹಗಳಿಂದಾಗಿ ಭಾರತದ ದೂರ ಸಂಪರ್ಕ, ಟೀವಿ ಪ್ರಸಾರ, ಹವಾಮಾನ ವೀಕ್ಷಣೆ ಹಾಗೂ ಸಂಪನ್ಮೂಲಗಳ ಮಾಪನ – ಹೀಗೆ ಅನೇಕ ಕ್ಷೇತ್ರಗಳು ಮಹತ್ತರ ಮುನ್ನಡೆ ಕಂಡವು.

ಸ್ವದೇಶಿ ಉಪಗ್ರಹಗಳಿಂದ ದೊರಕುವ ಸೇವೆಗಳನ್ನು ಮುಂದುವರೆಸಿಕೊಂಡು ಹೋಗುವ, ಅವುಗಳನ್ನು ಮತ್ತಷ್ಟು ಉತ್ತಮಗೊಳಿಸುವ ಹಾಗೂ ಹೊಸ ಸೇವೆಗಳನ್ನು ನೀಡುವ ನಿಟ್ಟಿನಲ್ಲಿ ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ ‘ಇಸ್ರೋ’ ಆ ಸಮಯದಲ್ಲಿ ತನ್ನ ಗಮನವನ್ನು ಕೇಂದ್ರೀಕರಿಸಿತ್ತು. ಆದರೆ ಹೊಸ ತಂತ್ರಜ್ಞಾನಗಳನ್ನು, ವಿಧಾನಗಳನ್ನು ಅಭಿವೃದ್ಧಿಪಡಿಸುವ, ವಿಜ್ಞಾನಿ ಹಾಗೂ ಎಂಜಿನಿಯರ್‌ಗಳಿಗೆ ಸವಾಲು ಒಡ್ಡುವ ಹಾಗೂ ದೇಶದ ದೊಡ್ಡ ವಿದ್ಯಾರ್ಥಿ ಸಮೂಹವನ್ನು ಪ್ರೇರೇಪಿಸುವ ದೃಷ್ಟಿಯಿಂದ ಭಾರತದಲ್ಲೇ ನಿರ್ಮಾಣವಾದ ಪುಟ್ಟ ರೋಬಾಟ್ ನೌಕೆಯೊಂದನ್ನು ಚಂದ್ರನತ್ತ ಉಡಾಯಿಸಿ, ನಂತರ ಅದು ಚಂದ್ರನನ್ನು ಸುತ್ತುವಂತೆ ಮಾಡಿ ಕಕ್ಷೆಯಿಂದಲೇ ಅದು ತನ್ನ ಉಪಕರಣಗಳ ನೆರವಿನೊಡನೆ ಚಂದ್ರನ ಅನ್ವೇಷಣೆಯನ್ನು ನಡೆಸುವುದಕ್ಕೆ ಸಂಬಂಧಿಸಿದ ಅಧ್ಯಯನವನ್ನು ಮೊದಲಿಗೆ ಕೈಗೊಳ್ಳಲಾಯಿತು. ಅದೇ ಅಧ್ಯಯನದ ಫಲಿತಾಂಶವು ದೇಶದ ವೈಜ್ಞಾನಿಕ ಹಾಗೂ ಎಂಜಿನಿಯರ್‌ಗಳ ಸಮೂಹ ಸಂಸ್ಥೆಗಳಲ್ಲಿ ಚರ್ಚೆಗೆ ಒಳಗಾಗಿ ಸಮ್ಮತಿಯನ್ನು ಪಡೆದ ಬಳಿಕ ತ್ವರಿತವಾಗಿ ಅದು ಮುನ್ನಡೆಯಲಾರಂಭಿಸಿತು. 2003ರಲ್ಲಿ ಅದಕ್ಕೆ ಸರ್ಕಾರದ ಪರವಾನಗಿ ದೊರೆತ ನಂತರ ಅದು ಕಾರ್ಯಕ್ರಮದ ರೂಪವನ್ನು ತಾಳಿ ‘ಚಂದ್ರಯಾನ’ ಎಂಬ ಹೆಸರನ್ನು ಪಡೆಯಿತು. ‘ಚಂದ್ರಯಾನ’ ಎಂಬ ಪದ ನೌಕೆಯ ಹೆಸರು ಮತ್ತು ಅದರ ಯಾನ – ಎರಡನ್ನೂ ಸೂಚಿಸುತ್ತದೆ.